# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸರ್ಕಾರದ ಇಲಾಖೆಗಳ ಇಲಾಖಾ ಮುಖ್ಯಸ್ಥರುಗಳು ಮತ್ತು ಇತರೆ ಅಧಿಕಾರಿಗಳ ಸಾಮಾನ್ಯ ವಿತ್ತಾಧಿಕಾರ ಪ್ರತ್ಯಾಯೋಜಿಸುವ ಪರಿಷ್ಕರಣೆ ಬಗ್ಗೆ.

**ಓದಲಾಗಿದೆ** :
1. ಸರ್ಕಾರದ ಆದೇಶ ಸಂಖ್ಯೆ:ಆಇ 1:ಟಿಎಫ್‌ಪಿ 2001 ಬೆಂಗಳೂರು, ದಿನಾಂಕ:02-02-2001.
2. ಸರ್ಕಾರದ ಆದೇಶ ಸಂಖ್ಯೆ:ಆಇ 1:ಟಿಎಫ್‌ಪಿ 2009 ಬೆಂಗಳೂರು, ದಿನಾಂಕ:30-05-2009.
3. ಸರ್ಕಾರದ ಆದೇಶ ಸಂಖ್ಯೆ:ಆಇ 2:ಟಿಎಫ್‌ಪಿ 2010 ಬೆಂಗಳೂರು, ದಿನಾಂಕ:30-04-2010.
4. ಆಯುಷ್ ನಿರ್ದೇಶನಾಲಯದ ಮುಖ್ಯ ಆಡಳಿತಾಧಿಕಾರಿಯವರ ಪತ್ರ ಸಂಖ್ಯೆ: ಆಯುಷ್ 211:ಸಿ(2) 2010-11 ದಿನಾಂಕ: 23-03-2011.
5. ಮಾನ್ಯ ಉಚ್ಚನ್ಯಾಯಾಲಯದ ಸಹಾಯಕ ರಿಜಿಸ್ಟ್ರಾರ್‌ರವರ ಪತ್ರ ಸಂಖ್ಯೆ.ಎಫ್‌ಸಿಎ II/82/2007 ದಿನಾಂಕ: 14-2-2012.

*****

**ಪ್ರಸ್ತಾವನೆ** :

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರುಗಳು ಮತ್ತು ಇತರೆ ಆಧಿಕಾರಿಗಳ ಆರ್ಥಿಕ ಅಧಿಕಾರವನ್ನು ಹೆಚ್ಚಿಸಿ ಪರಿಷ್ಕೃತ ಆದೇಶವನ್ನು ಹೊರಡಿಸಲಾಗಿತ್ತು. ಮೇಲೆ (2)ರಲ್ಲಿ ಓದಲಾದ ಆದೇಶದ ಕ್ರಮ ಸಂಖ್ಯೆ. 14 ರಲ್ಲಿ ಇಲಾಖಾ ಮುಖ್ಯಸ್ಥರುಗಳಿಗೆ ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಮಾಸಿಕ ಸಂಚಿತ ಸಂಭಾವನೆಯ ಮಿತಿಯನ್ನು ಹೆಚ್ಚಿಸಿ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗಿತ್ತು. ಹಿಂದಿನ ದಿನಾಂಕ: 2-2-2001ರ ಆದೇಶವನ್ನು ಉತ್ತಮಿಸಿ (Supersede) ಇಲಾಖಾ ಮುಖ್ಯಸ್ಥರುಗಳು ಹಾಗೂ ಇತರೆ ಅಧಿಕಾರಿಗಳಿಗೆ ಆರ್ಥಿಕ ಅಧಿಕಾರವನ್ನು ಪರಿಷ್ಕರಿಸಿ ಹೊರಡಿಸಲಾದ ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಸೇವೆಯನ್ನು ಪಡೆಯುವ ಅಧಿಕಾರವನ್ನು ಹಿಂತೆಗೆದುಕೊಳ್ಳಲಾಗಿರುತ್ತದೆ. ಇದಕ್ಕೆ ಬದಲಾಗಿ ದಿನಾಂಕ: 30-4-2010ರ ಸರ್ಕಾರದ ಆದೇಶದಲ್ಲಿನ ಕ್ರಮ ಸಂಖ್ಯೆ 25 ರಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ತಗೆದುಕೊಳ್ಳುವ ಅಧಿಕಾರವನ್ನು ಇಲಾಖಾ ಮುಖ್ಯಸ್ಥರುಗಳಿಗೆ ನೀಡಲಾಗಿರುತ್ತದೆ.

ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಆಡಳಿತಾಧಿಕಾರಿಗಳು, ಆಯುಷ್ ನಿರ್ದೇಶನಾಲಯ ಇವರು ಸ್ವಚ್ಛತೆ ಮುಂತಾದ ಕಾರ್ಯಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಯ ಸೇವೆಯನ್ನು ಪೂರ್ಣ ದಿನಗಳಿಗೆ ಪಡೆದಲ್ಲಿ ಹೆಚ್ಚಿನ ವೆಚ್ಚವಾಗುವುದಾಗಿ, ಈ ವ್ಯವಸ್ಥೆಗೆ ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಸೇವೆಯನ್ನು ಪಡೆದಲ್ಲಿ ಸರ್ಕಾರಕ್ಕೆ ಉಳಿತಾಯವಾಗುವುದಲ್ಲದೆ ಅವರ ಮೇಲೆ ನಿಯಂತ್ರಣವಿರುವುದರಿಂದ ಇವರ ಸೇವೆಯನ್ನು

ಪಡೆಯುವುದನ್ನು ಮರುಪ್ರಾರಂಭಿಸಲು ಹಿಂದಿನ ಆದೇಶಗಳಲ್ಲಿದ್ದ ಆರ್ಥಿಕ ಅಧಿಕಾರವನ್ನು ಸೇರ್ಪಡಿಸಿ ಪರಿಷ್ಕೃತ ಆದೇಶ ಹೊರಡಿಸಲು ಕೋರಿರುತ್ತಾರೆ. ಮೇಲೆ (5)ರಲ್ಲಿ ಓದಲಾದ ಪತ್ರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಸಹಾಯಕ ರಿಜಿಸ್ಟ್ರಾರ್ ರವರು ಸಹಾ ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಸೇವೆಯನ್ನು ಪಡೆಯುವ ಬಗ್ಗೆ ಅನುಮತಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಸರ್ಕಾರವು ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಸೇವೆಯನ್ನು ಪಡೆಯುವುದನ್ನು ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 7ರ ಟಿಪ್ಪಣಿ-2 ಮತ್ತು 55(2)(ಬಿ) ಪ್ರಕಾರ ಪುನ: ಪ್ರಾರಂಭಿಸಲು ಹಾಗೂ ಇವರ ಮಾಸಿಕ ಸಂಚಿತ ಸಂಭಾವನೆಯ ಗರಿಷ್ಠ ಮಿತಿಯನ್ನು ಪರಿಷ್ಕರಿಸಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಆಇ 05 ಟಿಎಫ್‌ಪಿ 2012,**
**ಬೆಂಗಳೂರು, ದಿನಾಂಕ:26-06-2012.**

ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 7ರ ಟಿಪ್ಪಣಿ-2 ಮತ್ತು 55 (2) (ಬಿ) ಪ್ರಕಾರ ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಮತ್ತು ಇತರೆ ಅಧಿಕಾರಿಗಳಿಗೆ ಒಟ್ಟಾರೆ ಮೂರು ವರ್ಷಗಳ ಅವಧಿ ಮೀರದಂತೆ ಸಾದಿಲ್ವಾರು ವೆಚ್ಚದಲ್ಲಿ ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಸೇವೆಯನ್ನು ಪಡೆಯುವುದನ್ನು ಪುನ: ಪ್ರಾರಂಭಿಸಲು ಮತ್ತು ಮಾಸಿಕ ಸಂಚಿತ ಸಂಭಾವನೆ ಯನ್ನು ಮಂಜೂರು ಮಾಡುವ ಆರ್ಥಿಕ ಅಧಿಕಾರವನ್ನು ಪ್ರತ್ಯಾಯೋಜಿಸಲು ಮಂಜೂರಾತಿ ನೀಡಲಾಗಿದೆ.

ಈ ಕೆಳಗಿನಂತೆ ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಮಾಸಿಕ ಸಂಚಿತ ಸಂಭಾವನೆಯನ್ನು ಪರಿಷ್ಕರಿಸಿ ಮಂಜೂರಾತಿ ನೀಡಲಾಗಿದೆ.

...3

| ಅಧಿಕಾರದ ವಿವರಗಳು | ಇಲಾಖಾ ಮುಖ್ಯಸ್ಥರುಗಳು | ವಿಭಾಗೀಯ ಮಟ್ಟದ ಅಧಿಕಾರಿಗಳು | ಜಿಲ್ಲಾ ಮಟ್ಟದ ಅಧಿಕಾರಿಗಳು | ಉ.ವಿ.ಮಟ್ಟದ ಅಧಿಕಾರಿಗಳು | ತಾಲ್ಲೂಕು ಮಟ್ಟದ ಅಧಿಕಾರಿಗಳು |
|---|---|---|---|---|---|
| ಅಧೀನ ಕಛೇರಿಗಳಲ್ಲಿ ಒಟ್ಟಾರೆ ಮೂರು ವರ್ಷಗಳು ಮೀರದಂತೆ ಸಾದಿಲ್ವಾರು ವೆಚ್ಚದಲ್ಲಿ ಸಂದಾಯವಾಗಬೇಕಾದ ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಸೇವೆಯನ್ನು ಪಡೆಯಲು ಮಂಜೂರಾತಿ. (ಸಾ.ವೆ.ಕೈ. ನಿಯಮ 7 ರ ಟಿಪ್ಪಣಿ–2 ಮತ್ತು 55(2) (b). | ಗರಿಷ್ಠ ರೂ.3500/– ರವರೆಗೆ ಪ್ರತಿ ತಿಂಗಳು ಪ್ರತಿ ಕೆಲಸದಾಳಿಗೆ | ಗರಿಷ್ಠ ರೂ.3500/– ಗಳವರೆಗೆ ಪ್ರತಿ ತಿಂಗಳು ಪ್ರತಿ ಕೆಲಸದಾಳಿಗೆ | ಗರಿಷ್ಠ ರೂ.3000/– ಗಳವರೆಗೆ ಪ್ರತಿ ತಿಂಗಳು ಪ್ರತಿ ಕೆಲಸದಾಳಿಗೆ | ಗರಿಷ್ಠ ರೂ.2500/– ಗಳವರೆಗೆ ಪ್ರತಿ ತಿಂಗಳು ಪ್ರತಿ ಕೆಲಸದಾಳಿಗೆ | ಗರಿಷ್ಠ ರೂ.2000/– ಗಳವರೆಗೆ ಪ್ರತಿ ತಿಂಗಳು ಪ್ರತಿ ಕೆಲಸದಾಳಿಗೆ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ಸಿ. ಶಾಮರಾವ್)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ
(ಆರ್ಥಿಕ ನಿಯಮಗಳು, ಆಯವ್ಯಯ ಸಂಕಲನ
ಮತ್ತು ಸಮಿತಿ ಶಾಖೆ).

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ಮುಂದಿನ ರಾಜ್ಯಪತ್ರ ಸಂಚಿಕೆಯಲ್ಲಿ ಪ್ರಕಟಿಸಿ 25 ಪ್ರತಿಗಳನ್ನು ಒದಗಿಸುವುದು.

ಪ್ರತಿಗಳು:

1. ಮಹಾಲೇಖಪಾಲರು (ಎ ಮತ್ತು ಇ), / ಪ್ರಧಾನ ಮಹಾಲೇಖಪಾಲರು (ಸಿ & ಸಿಎ) ಮತ್ತು ಮಹಾಲೇಖಪಾಲರು (ಆಡಿಟ್–2), ಕರ್ನಾಟಕ, ರೆಸಿಡೆನ್ಸಿ ಪಾರ್ಕ್ ರಸ್ತೆ, ಅಂಚೆ ಪೆಟ್ಟಿಗೆ ಸಂ. 5329/5369, ಬೆಂಗಳೂರು–1.
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿ.
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
5. ಎಲ್ಲಾ ಜಿಲ್ಲಾಧಿಕಾರಿಗಳು.
6. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
7. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
8. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
9. ಸರ್ಕಾರದ ಉಪ ಕಾರ್ಯದರ್ಶಿಗಳು/ಸರ್ಕಾರದ ಅಧೀನ ಕಾರ್ಯದರ್ಶಿಗಳು/ ಶಾಖಾಧಿಕಾರಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
10. ಹೆಚ್ಚುವರಿ ಪ್ರತಿಗಳು.
11. ಶಾಖಾ ರಕ್ಷಿತ ಕಡತ.